ಯುವ ನೀರಿನ ಅವಶ್ಯಕತೆ ಇದೆ ಎಂಬುದು ಗೊತ್ತಾದ ಕ್ಷಣದಲ್ಲಿ ನಾವು ಖಂಡಿತವಾಗಿಯೂ ಅಂತಹ ಸ್ಥಳಗಳಲ್ಲಿ ಬಾವಿಗಳನ್ನು ಮಂಜೂರುಮಾಡುತ್ತೇವೆ. ಅಷ್ಟೇ ಹೊರತು ಸಂಸ್ಥಾನಾಮಳೆ ಎಲ್ಲೆಲ್ಲಿ ಬಾವಿ ಬೇಕು ಎಂಬ ಅಂಕಿಅಂಶಗಳನ್ನೊಳಗೊಂಡ ಪಟ್ಟಿ ಮಾಡತಕ್ಕ ಅವಶ್ಯಕತೆ ಸರ್ಕಾರದವರಿಗೆ ಕಂಡುಬಂದಿಲ್ಲ. ಆದ್ದರಿಂದ ಪಟ್ಟಿ ತಯಾರು ಮಾಡಿಲ್ಲ.

ಶ್ರೀ ಟಿ. ಹನುಮಯ್ಯ.—ಕೆಲವು ಕಡೆಗಳಲ್ಲಿ ಹರಿಜನರಿಗೆ ನೀರನ್ನು ಕೈಯಿಂದ ಎತ್ತಿಹಾಕುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಮೈಸೂರು ಸಂಸ್ಥಾನದಲ್ಲಿ ಪ್ರತಿಯೊಂದು ಸಾಲಿನಲ್ಲೂ ಬಾವಿಗಳಿಗಾಗಿ ಅಲಾಟ್ ಮಾಡುತ್ತಾ ಇರುತಕ್ಕ ಗ್ರ್ಯಾಂಟ್ ಹಣ ಪೂರ್ತಿಯಾಗಿ ಖರ್ಚಾಗದೆ ಲ್ಯಾಪ್ಸ್ ಆಗುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರ ಗಮನಕ್ಕೆ ಬಂದಿಲ್ಲ. ಮಂಜೂರಾದ ಹಣ ಸಾಲ್ ಆಫ್ಸೇರ್‌ಒಳಗೆ ವಿನಿಯೋಗಮಾಡಬೇಕೆಂದು ಸರ್ಕಾರದವರು ಆಯಾ ಸ್ಥಳೀಯ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಇದಕ್ಕೆ ಸರಿಯಾದ ಗಮನ ಕೊಡದೇ ಈ ರೀತಿ ಲ್ಯಾಪ್ಸ್ ಆಗುತ್ತಿದೆ. ಇದನ್ನು ವಿಚಾರಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಹಾಗೆ ಆಗಿದ್ದರೆ ಜಾಗ್ರತೆ ಸರಿಪಡಿಸುತ್ತೇವೆ.

Labour Colony of Srirampuram (Confirmation of Tenements).

Q.—161. Sri V. R. NAIDU (Malleswaram).—

Will the Government be pleased to state :—

(*a*) how many years ago the Labour Colony of Srirampuram was formed;

(*b*) whether Government is aware that Sir Mirza M. Ismail as Dewan had promised to confirm the tenements in which the labourers are living to the labourers themselves after a period of twelve years at original cost;

(*c*) whether Government will consider the confirmation of these tenements to the labourers accordingly?

A.—Sri T. CHANNIAH (Minister for Public Health and Local Self-Government).—

(*a*) Narly twenty years ago.

(*b*) The Government is not aware of any such promise made.

(*c*) The question does not arise in view of the reply to (*b*).

ಶ್ರೀ ಎ. ಆರ್. ನಾಯ್ಡು.—ಶ್ರೀರಾಮಪುರದಲ್ಲಿ ಲೇಬರ್ ಕಾಲೊನಿ ಕಟ್ಟಿಸಿ ಎಷ್ಟು ವರ್ಷಗಳಾದವು?

ಶ್ರೀ ಟಿ. ಚನ್ನಯ್ಯ.—20 ವರ್ಷ.

ಶ್ರೀ ಎ. ಆರ್. ನಾಯ್ಡು.—ಈ ಹಿಂದೆ ಶ್ರೀರಾಮಪುರ ಲೇಬರ್ ಕಾಲೊನಿಯನ್ನು ಕಟ್ಟಿಸಿಕೊಟ್ಟವರ್ ಮಿರ್ಜಾ ಇಸ್ಮೈಲ್‌ರವರು ಆ ಗೃಹಗಳಲ್ಲಿ ವಾಸ ಮಾಡುವ ಕಾರ್ಮಿಕರಿಗೆ ಅವುಗಳನ್ನು ಅನಲು ಬೆರೆಗೇ ಬಿಟ್ಟುಕೊಡಲು ವಾಗ್ದಾನಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಚನ್ನಯ್ಯ.—ಇಲ್ಲ ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಎ. ಆರ್. ನಾಯ್ಡು.—ಈಗಲಾದರೂ ಶ್ರೀರಾಮಪುರದಲ್ಲಿ ಕಟ್ಟಿರುವ ಆ ಲೇಬರ್ ಕಾಲೊನಿಯಲ್ಲಿ ವಾಸಮಾಡುತ್ತಿರುವ ಕಾರ್ಮಿಕರಿಗೇ ಆ ಗೃಹಗಳನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಎ. ಆರ್. ನಾಯ್ಡು.—ಬೇರೆ ಪ್ರಶ್ನೆ ಆದರೂ ಪರವಾಗಿಲ್ಲ, ದಯವಿಟ್ಟು ಬಡವರಿಗೇ ಅವನ್ನು ಕೊಡಬೇಕು, ನ್ಯಾಯವಿ? (ನಗು!)

Malaria in Holalkere Taluk (Measures to control).

Q.—189. Sri G. SIVAPPA (Holalkere).—

Will the Government be pleased to state :—

(*a*) whether there is acute spread of malaria in Holalkere Taluk;

(*b*) whether there are not representations to spray D.D.T. in Holalkere Taluk;

(*c*) the action taken in this respect?

A.—Sri T. CHANNIAH (Minister for Public Health and Local Self-Government).—

(*a*) Yes. During July 1954.

(*b*) Yes.

(*c*) Comprehensive proposals for the extension of D.D.T. spraying to Municipalities both malarious and non-malarious have been obtained from the Head of the Public Health Department and they are under active consideration of Government.

As a measure of immediate relief to the people, distribution of anti-malaria drugs has however been taken up on a mass scale and six taluks including Challakere in Chitaldrug District have been covered.